# ನಿತ್ಯನೂತನವೀ ಸಂಗೀತ

**ದಿನನಿತ್ಯದ** ಒತ್ತಡದ ಬದುಕಿನಲ್ಲಿ ನಾವು ಕಂಡುಕೊಳ್ಳಬಹುದಾದ ಉತ್ತಮ ಒತ್ತಡ ನಿವಾರಣೆಯ ಚಿಕಿತ್ಸೆ 'ಸಂಗೀತ' (**Stress Busting Therapy**) ಎಂದೆನ್ನಬಹುದು.

ಅಂದು ರೇಡಿಯೊದಲ್ಲಿ ಪ್ರಸಾರವಾಗುತಿದ್ದ 'ಹೂವೊಂದು ಬಳಿ ಬಂದು ತಾಕಿತು ಎನ್ನೆದೆಯಾ', 'ಮಲೆನಾಡ ಹೆಣ್ಣ ಮೈ ಬಣ್ಣ', 'ಎಂದೆಂದೂ ನಿನ್ನನು ಮರೆತು ಬದುಕಿರಲಾರೆ' ಇತ್ಯಾದಿ ಹಾಡುಗಳು ಇಂದಿಗೂ ಮನ ತಣಿಸುವವು. 'ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ' ಹಾಡಿಗೆ ಮನಸೋಲದವರೇ ಇಲ್ಲ. ಹಾಡುಗಳಿಗೆ ಯಾವುದೋ ಲೋಕಕ್ಕೆ ನಮ್ಮನ್ನು ಕರೆದೊಯ್ಯುವ ಮಾಂತ್ರಿಕ ಶಕ್ತಿ ಇದೆ. ತೊಂಬತ್ತರ ದಶಕದಲ್ಲಿ ಟೇಪ್ ರೆಕಾರ್ಡರ್ ಕಾಲದಲ್ಲಿ ಕೇಳಿದ ಮೈಸೂರ ಮಲ್ಲಿಗೆ ಕ್ಯಾಸೆಟ್‌ನ 'ರಾಯರು ಬಂದರು ಮಾವನ ಮನೆಗೆ', 'ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು' ಭಾವಗೀತೆಗಳು ಇಂದಿಗೂ ನಿತ್ಯನೂತನ.



ಹಿಂದಿ ಹಾಡುಗಳ ಪ್ರಸಿದ್ಧ 'ಬಿನಾಕಾ ಗೀತ್ ಮಾಲಾ'ವಂತೂ ಅದ್ಭುತ. ಹಳೆಯ ಸದಭಿರುಚಿಯ 'ದಿಲ್ ಕಾ ಭಂವರ್ ಕರೇ ಪುಕಾರ್', 'ಕೌನ್ ಆಯಾ ನಿಗಾಹೋಂ ಮೇ ಚಮಕ್ ಜಾಗ್ ಉಠೀ', 'ನೀಲೆ ಗಗನ್ ಕೇ ತಲೇ, ರಿಮ್ ಜಿಮ್ ಗಿರೇ ಸಾಂವನ್' ಹಾಡುಗಳಂತೂ ಎಂದೆಂದಿಗೂ ಅಮರ. 'ಮಾಸೂಮ್' ಚಿತ್ರದ ಗುಲ್ಜಾರ್ ಸಾಹಿತ್ಯವಿರುವ 'ತುಜ್ಸೆ ನಾರಾಜ್ ನಹೀಂ ಜಿಂದಗಿ' ಹಾಡು ಇಂದಿಗೂ ಕಣ್ಣಂಚನ್ನು ತುಂಬಿಸುವುದು.

ಈ ಹಾಡುಗಳನ್ನು ಆಲಿಸಿದರೆ ಮನ ನವಿಲಿನಂತೆ ಗರಿಬಿಚ್ಚಿ ನಲಿವುದಂತೂ ನಿಜ. ಹಾಡುಗಳಿಗಿರುವ ಶಕ್ತಿಯೇ ಅಂತಹುದು. ನಾವು ಸುಖದಲ್ಲಿದ್ದರೆ ಹಾಡುಗಳ ಸಂಗೀತ ಮನ ತಣಿಸುವುದು ಮತ್ತು ದುಃಖದಲ್ಲಿದ್ದರೆ ಹಾಡುಗಳ ಸಾಹಿತ್ಯ ಮನತಟ್ಟುವುದು ಎಂದು ಎಲ್ಲೋ ಓದಿದ ಮಾತು ಸತ್ಯ ಎನಿಸುವುದು.

—ಶಾಂತಲಾ ರಾಜಗೋಪಾಲ್

# ಹಾಡೆಂದರೆ ಆಕರ್ಷಣೆ

**ಸಂಗೀತಮಯಳಾದ** ಈ ಪ್ರಕೃತಿಮಾತೆಗೆ ನಮನಗಳು. ಹಾಲುಗಲ್ಲದ ಮುದ್ದು ಕೂಸಿಗೂ ಹಲ್ಲಿಲ್ಲದ ವೃದ್ಧನಿಗೂ ವಯಸ್ಸಿನ ಯಾವ ಗಡಿ ಇಲ್ಲದೆ ಎಲ್ಲರಿಗೂ ಮುದ ನೀಡುವುದೇ ಹಾಡು.

ಬಾಲ್ಯದಿಂದಲೇ ಹಾಡೆಂದರೆ ನನಗೇನೋ ಆಕರ್ಷಣೆ. ಆಡುವ ವಯಸ್ಸಿನಲ್ಲಿ ನಾನು ಕೇಳಿ ಗುನುಗಿದ 'ರೆಕ್ಕೆ ಮುರಿದ ಹಕ್ಕಿಯು ನಾನು' ಅಚ್ಚುಮೆಚ್ಚಿನ ಹಾಡಾಗಿತ್ತು.

ದ.ರಾ. ಬೇಂದ್ರೆಯವರ 'ಮೂಡಲ ಮನೆಯ ಮುತ್ತಿನ ನೀರಿನ' ಈ ಗೀತೆಗೆ ನಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಗೆಳತಿಯರ ಜೊತೆಗೂಡಿ ಮಾಡಿದ ನೃತ್ಯ ಹಳೆಯ ನೆನಪಾದರೂ, ಹಾಡು ಮಾತ್ರ ಎದೆಯೊಳಗೆ ಹಚ್ಚಹಸಿರು. ಬೇಸಿಗೆ ರಜೆಗೆ ಅಜ್ಜಿಯ ಊರಲ್ಲಿ ಸಂಜೆ ಗೆಳತಿಯರ ಒಡಗೂಡಿ ದೇವಸ್ಥಾನದಲ್ಲಿ ಹಾಡಿದ ಭಕ್ತಿಗೀತೆ, 'ನ್ಯಾಯನೀತಿ ಮೂರ್ತಿವೆತ್ತ ಸತ್ಯದೈವವೇ' ಈಗಲೂ ಕೇಳಿದಾಗ ಮೈಮನ ಪುಳಕವಾಗುತ್ತೆ. ಶೃತಿಬದ್ಧವಾಗಿ ಹಾಡಿದ್ದೆನೊ ತಿಳಿಯೆ, ಆದರೆ ಆ ವಯಸ್ಸಿನಲ್ಲಿ ಮುಗ್ಧತೆಯಲ್ಲಿ ಹಾಡಿದ್ದೆ. ಕಾಲ ಕಳೆದ ಹಾಗೆ ಕಾಡುವ, ಕೇಳುವ, ಗುನುಗುವ ಹಾಡುಗಳು ಬೇರೆ ಬೇರೆಯಾದವು. ಅಪ್ಪನು ತೀರಿಹೋಗಿ ಇಷ್ಟು ವರ್ಷಗಳ ನಂತರ ಸದಾ ಕಾಡುವ ಒಂದು ಹಾಡು, 'ಆಡಿಸಿ ನೋಡು ಬೀಳಿಸಿ ನೋಡು...'. ಅಪ್ಪನ ಮನೋಭಾವ ಈ ಹಾಡಲ್ಲಿ ಕಾಣ್ತೇನಿ. ಇನ್ನು ನನ್ನ ಮಗ ನನಗಾಗಿ ಕಲಿತು ಹಾಡಿದ ಮೊದಲ ಭಾವಗೀತೆ ಜಿ.ಎಸ್. ಶಿವರುದ್ರಪ್ಪರವರ 'ಎದೆತುಂಬಿ ಹಾಡಿದೆನು' ನನ್ನ ಕಣ್ಣುಗಳ ತೇವ ಮಾಡಿತ್ತು.

ಬದುಕಿನ ಪ್ರತಿ ಸಂದರ್ಭದಲ್ಲಿ, ಸಂತಸಕ್ಕೂ ಸಂತಾಪಕ್ಕೂ ಕೆಲವು ಹಾಡುಗಳ ಜೊತೆ ಪ್ರೀತಿಯ ನಂಟು ಬೆಸೆದುಕೊಂಡಿರುತ್ತದೆ. ಕೊನೆಯದಾಗಿ ಹೇಳುವುದಾದರೆ, 'ಹಾಡು ಹಳೆಯದಾದರೇನು ಭಾವ ನವನವೀನ'...

—ರಶ್ಮಿ ರಮೇಶ್

# ಗಿಲ್ ಗಿಲ್ ಗಿಲಿ ಗಿಲಕ್ಕ್...

**ಆಗಿನ್ನೂ** 3ನೇ ತರಗತಿ. ಕನ್ನಡ ಸಿನಿಮಾಗಳು, ರಾಜ್ ಕುಮಾರ್, ಜಯಂತಿ, ಉದಯ್ ಕುಮಾರ್ ಅಭಿಮಾನಿಯಾಗಿದ್ದೆ. ಕನ್ನಡ ಚಿತ್ರಗೀತೆಗಳೆಂದರೆ ಕಿವಿ ನಿಮಿರುತ್ತಿದ್ದವು.

'ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು' ಕೇಳಿ ರಾತ್ರಿ ಕುದುರೆ ಮೇಲೆ ಕತ್ತಿ ಹಿಡಿದು ಸವಾರಿ ಮಾಡಿದ ಕನಸು ಕಂಡಿದ್ದೆ. 'ಯಾರು ಯಾರು ನೀ ಯಾರು?' ಹಾಡಲ್ಲಿ ರುಂಡ ಮುಂಡ ಬೇರಾದಾಗ ಬೆವರಿದ್ದೆ.

ರತ್ನಮಂಜರಿ 'ಗಿಲಿಗಿಲಿ' ಸದ್ದು ಮಾಡಿ ಕುಣಿದಾಗ, ಕಳ್ಳ 'ಬಾರೆ ಬಾರೆ ನನ್ನ ಹಿಂದೆ ಹಿಂದೆ' ಎಂದು ಸದಾರಮೆಯನ್ನು ಛೇಡಿಸಿದಾಗ, 'ಅತಿ ಮಧುರ ಅನುರಾಗ' ಕೇಳಿದಾಗ ಸಂಭ್ರಮಿಸಿದವನು, 'ಬಾಳೊಂದು ನಂದನ...' ಆಲಿಸಿ ಅತ್ತಿದ್ದೆ.

ಮುಂದೆ ಕಾಲೇಜು ಮೆಟ್ಟಿಲು ಹತ್ತಿದಾಗ ಚಿಗುರುಮೀಸೆ ಕುಡಿಯೊಡೆದಿದ್ದರಿಂದಲೋ ಏನೋ ಅಭಿರುಚಿ ಬದಲಾಯಿತು. ಪ್ರಣಯಗೀತೆಗಳೆಡೆಗೆ ಮನ ವಾಲಿತ್ತು. 'ಓ ನಲ್ಲನೆ ಸವಿ ಮಾತೊಂದಾ', 'ನೀ ಬಂದು ನಿಂತಾಗ', 'ಆಹಾ ಮೈಸೂರು ಮಲ್ಲಿಗೆ' ಎದೆಯ ಕದ ತಟ್ಟಿದ್ದವು. ಕ್ರೇಜಿಸ್ಟಾರ್ ರವಿಚಂದ್ರನ್ ಚಿತ್ರಗಳನ್ನು ಅದ್ಭುತ ಗೀತೆಗಳಿಗಾಗಿ ವೀಕ್ಷಿಸಿದ್ದೆ.

50 ದಾಟುತ್ತಿದ್ದಂತೆ ಮನಸ್ಸು ಮಲ್ಲಿಗೆಯಾಗುವೆಡೆ ಸಾಗಿತ್ತು. 'ಎಲ್ಲೆಲ್ಲು ಸಂಗೀತವೇ' ಮಾದರಿಯ ಮೃದು ಮಾರ್ದವ ಗೀತೆಗಳು ಹೃದಯಸ್ಪರ್ಶಿ ಎನಿಸುತ್ತಿದ್ದವು.

ಈಗ ವಯಸ್ಸು 71 ವರ್ಷ! ನನ್ನ ಅತಿ ಮೆಚ್ಚಿನ ಹಿಂದಿ ಸಂಗೀತ ನಿರ್ದೇಶಕ ರಾಹುಲ್ ದೇವ್ ಬರ್ಮನ್ ಅವರ ಹಳೆಯ ಸುಮಧುರ ಗೀತೆಗಳ ದಾಸನಾಗಿಬಿಟ್ಟಿದ್ದೇನೆ. ಆದರೂ ಇಂದಿಗೂ ಯಾರಾದರೂ ನಿಮ್ಮ ಮೆಚ್ಚಿನ ಗೀತೆ ಯಾವುದೆಂದು ಕೇಳಿದರೆ ಮೊದಲು ನೆನಪಾಗುವುದು 'ಬಿಂಕದ ಸಿಂಗಾರಿ', 'ಬಾರೇ ಬಾರೇ ಚೆಂದದ ಚೆಲುವಿನ ತಾರೆ', 'ಗಿಲ್ ಗಿಲ್ ಗಿಲಿ ಗಿಲಕ್ಕ್...', 'ಮೆಲ್ಲುಸಿರೇ ಸವಿಗಾನ' ಮತ್ತಷ್ಟು ಗೀತೆಗಳು!

ಅಣ್ಣಾವ್ರು ಅದ್ಭುತವಾಗಿ ಅಭಿನಯಿಸಿರುವ 'ನಿನ್ನ ನನ್ನ ಮನವು ಸೇರಿತು' ಗೀತೆ ಕೇಳುತ್ತಾ ಅದೆಷ್ಟೋ ರಾತ್ರಿ ರೋದಿಸಿದ್ದೇನೆ! ನಿಜಕ್ಕೂ ಗೀತೆಗಳು ಅನುದಿನದ ಬಾಳಿಗೆ ಸ್ಫೂರ್ತಿದಾಯಕ, ಆಮ್ಲಜನಕ!

— ಕೆ. ಶ್ರೀನಿವಾಸರಾವ್
ಹರಪನಹಳ್ಳಿ

